ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-06-1971.

*ಬುದ್ಧಿಯ ಅಲೌಕಿಕ ಡ್ರಿಲ್* (बुद्धि की अलौकिक ड्रिल)

ಧ್ವನಿಯಿಂದ ದೂರವಾಗಿರುವುದು ಚೆನ್ನಾಗಿದೆಯೋ ಅಥವಾ ಧ್ವನಿಯಲ್ಲಿರುವುದು ಚೆನ್ನಾಗಿದೆಯೋ? ಅಸಲಿ ದೇಶ ಅಥವಾ ಅಸಲಿ ಸ್ವರೂಪದಲ್ಲಿ ಧ್ವನಿ ಇದೆಯಾ? ಯಾವಾಗ ತಮ್ಮ ಅಸಲಿ ಸ್ಥಿತಿಯಲ್ಲಿ ಸ್ಥಿತರಾಗುತ್ತೀರೋ ಆಗ ಧ್ವನಿಯಿಂದ ದೂರವಾಗಿರುವ ಸ್ಥಿತಿ ಹಿಡಿಸುತ್ತದೆ. ಈ ರೀತಿ ಪ್ರತಿಯೊಬ್ಬರೂ ಅಭ್ಯಾಸ ಮಾಡುತ್ತಿದ್ದೀರಾ? ಯಾವಾಗ ಬೇಕೋ ಆಗ, ಹೇಗೆ ಬೇಕೋ ಅದೇ ಸ್ವರೂಪದಲ್ಲಿ ಸ್ಥಿತರಾಗಬೇಕು. ಯೋಧರು ಯುದ್ಧದ ಮೈದಾನದಲ್ಲಿ ಯಾವಾಗ ಮತ್ತು ಹೇಗೆ ಆದೇಶ ಸಿಗುತ್ತದೆಯೋ ಹಾಗೆ ಮಾಡುತ್ತಾರೆ. ಅದೇ ರೀತಿ ಆತ್ಮಿಕ ಯೋಧರು ಯಾವಾಗ ಮತ್ತು ಹೇಗೆ ಆದೇಶ ಸಿಗುತ್ತದೆಯೋ ಹಾಗೆ ತಮ್ಮ ಸ್ಥಿತಿಯನ್ನು ಸ್ಥಿರ ಮಾಡಿಕೊಳ್ಳಬಲ್ಲಿರಾ? ಏಕೆಂದರೆ ಮಾಸ್ಟರ್ ಜ್ಞಾನಪೂರ್ಣರೂ ಆಗಿದ್ದೀರಿ ಮತ್ತು ಮಾಸ್ಟರ್ ಸರ್ವಶಕ್ತಿವಂತರೂ ಆಗಿದ್ದೀರಿ. ಎರಡೂ ಆಗಿರುವುದರಿಂದ ಒಂದು ಕ್ಷಣಕ್ಕಿಂತ ಕಡಿಮೆ ಸಮಯದಲ್ಲಿ ಯಾವ ಸ್ಥಿತಿಯಲ್ಲಿ ಸ್ಥಿತರಾಗಬಯಸುವಿರೋ ಆ ಸ್ಥಿತಿಯಲ್ಲಿ ಸ್ಥಿತರಾಗುವಂತಹ ಆತ್ಮಿಕ ಯೋಧರಾಗಿದ್ದೀರಾ?ಪರಮಧಾಮ ನಿವಾಸಿಗಳಾಗಿ ಎಂದು ಈಗಲೇ ಹೇಳಿದರೆ, ಈ ದೇಹ ಮತ್ತು ದೇಹದ ದೇಶವನ್ನು ಮರೆತು ಅಶರೀರಿ ಪರಮಧಾಮ ನಿವಾಸಿಯಾಗುವ ಅಭ್ಯಾಸವಿದೆಯೇ? ಈಗೀಗ ಪರಮಧಾಮ ನಿವಾಸಿಯಿಂದ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ, ಈಗೀಗ ಸೇವೆಗಾಗಿ ಶಬ್ದದಲ್ಲಿ ಬನ್ನಿ, ಸೇವೆ ಮಾಡುತ್ತಾ ತಮ್ಮ ಸ್ವರೂಪದ ಸ್ಮೃತಿಯಿರಬೇಕು - ಇಂತಹ ಅಭ್ಯಾಸಿಯಾಗಿದ್ದೀರಾ? ಹೀಗೆ ಅಭ್ಯಾಸಿ ಆಗಿದ್ದೀರಾ? ಅಥವಾ ಪರಮಧಾಮ ನಿವಾಸಿಯಾಗಲು ಬಯಸಿ ಮತ್ತೆ-ಮತ್ತೆ ಧ್ವನಿಯಲ್ಲಿ ಬರುವ ಅಭ್ಯಾಸ ಮಾಡುತ್ತಿಲ್ಲ ತಾನೆ? ತಮ್ಮ ಬುದ್ಧಿಯನ್ನು ಎಲ್ಲಿ ಬೇಕೋ ಅಲ್ಲಿ ಒಂದು ಕ್ಷಣಕ್ಕಿಂತ ಕಡಿಮೆ ಸಮಯದಲ್ಲಿ ಸ್ಥಿರಗೊಳಿಸಬಲ್ಲಿರಾ? ಹೀಗೆ ಅಭ್ಯಾಸವಾಗಿದೆಯಾ? ಮಾಸ್ಟರ್ ಸರ್ವಶಕ್ತಿವಂತ ಎಂದು ತಮ್ಮನ್ನು ತಿಳಿಯುತ್ತೀರಾ? ಹಾಗಾದರೆ ತಮ್ಮ ಬುದ್ಧಿಯ ಏಕಾಗ್ರತೆಯನ್ನು ಅಧಿಕಾರದಿಂದ ಎಲ್ಲಿ ಬೇಕೋ ಅಲ್ಲಿ ಜೋಡಿಸಲಾರಿರಾ?

ಅಧಿಕಾರಿಯ ಮುಂದೆ ಈ ಅಭ್ಯಾಸ ಕಷ್ಟವೋ ಅಥವಾ ಸಹಜವೋ? ಸ್ಥೂಲ ಕರ್ಮೇಂದ್ರಿಯಗಳನ್ನು ಯಾವಾಗ ಬೇಕೋ ಆಗ, ಎಲ್ಲಿ ಬೇಕೋ ಅಲ್ಲಿ ಉಪಯೋಗಿಸಬಲ್ಲಿರಾ? ಈಗ ಕೈಯನ್ನು ಮೇಲೆ ಅಥವಾ ಕೆಳಗೆ ಮಾಡಬೇಕೆಂದರೆ ಮಾಡಬಲ್ಲಿರಿ. ಸ್ಥೂಲ ಕರ್ಮೇಂದ್ರಿಯಗಳ ಯಜಮಾನಿಯಾಗಿ ಯಾವಾಗ ಬೇಕೋ ಆಗ ಕಾರ್ಯದಲ್ಲಿ ತೊಡಗಿಸಬಹುದು. ಅದೇ ರೀತಿ ಸಂಕಲ್ಪವನ್ನು ಅಥವಾ ಬುದ್ಧಿಯನ್ನು ಎಲ್ಲಿ ಬೇಕೋ ಅಲ್ಲಿ ಜೋಡಿಸಬೇಕೆಂದರೆ ಅಲ್ಲಿ ಜೋಡಿಸಬಹುದು. ಇದನ್ನೇ ಈಶ್ವರೀಯ ಅಧಿಕಾರ ಎಂದು ಕರೆಯಲಾಗುತ್ತದೆ. ಅದೇ ರೀತಿ ಬುದ್ಧಿಯ ಎಳೆತವನ್ನು ಸಹಜವಾಗಿ ಎಲ್ಲಿ ಬೇಕೋ ಅಲ್ಲಿ ಜೋಡಿಸಬಹುದು. ಸ್ಥೂಲ ಕೈ- ಕಾಲುಗಳನ್ನು ಬಹಳ ಸಹಜ ರೀತಿಯಲ್ಲಿ ಎಲ್ಲಿ ಬೇಕೋ ಅಲ್ಲಿ ಕರ್ಮ ಮಾಡಲು ಉಪಯೋಗಿಸುವ ಅಭ್ಯಾಸವುಳ್ಳವರಿಗೆ ಮಾಸ್ಟರ್ ಸರ್ವಶಕ್ತಿವಂತ ಅಥವಾ ಮಾಸ್ಟರ್ ಜ್ಞಾನಪೂರ್ಣ ಎಂದು ಹೇಳಲಾಗುತ್ತದೆ. ಅಭ್ಯಾಸಿಯಾಗಿರದಿದ್ದರೆ ಮಾಸ್ಟರ್ ಸರ್ವಶಕ್ತಿವಂತ ಅಥವಾ ಜ್ಞಾನಪೂರ್ಣ ಎಂದು ಕರೆಯಲಾಗುವುದಿಲ್ಲ. ಯಾರಿಗೆ ಪೂರ್ಣ ಜ್ಞಾನವಿದೆಯೋ ಈ ಸಮಯ ಏನು ಮಾಡಬೇಕು, ಏನು ಮಾಡಬಾರದು, ಇದರಿಂದ ಏನು ಲಾಭವಿದೆ ಮತ್ತು ಮಾಡದೇ ಇರುವುದರಿಂದ ಏನು ಹಾನಿಯಿದೆ, ಈ ಜ್ಞಾನವಿರುವವರೇ ಜ್ಞಾನಪೂರ್ಣರಾಗಿದ್ದಾರೆ. ಜೊತೆಗೆ ಮಾಸ್ಟರ್ ಸರ್ವಶಕ್ತಿವಂತರಾಗಿರುವ ಕಾರಣ ಸರ್ವ ಶಕ್ತಿಗಳ ಆಧಾರದಿಂದ ಈ ಅಭ್ಯಾಸ ಸಹಜ ಮತ್ತು ನಿರಂತರವಾಗುತ್ತದೆ. ಅಧ್ಯಯನದ ಕೊನೆಯ ಪಾಠ ಯಾವುದು ಮತ್ತು ಮೊದಲ ಪಾಠವೇನು? ಮೊದಲನೆಯ ಪಾಠ ಮತ್ತು ಅಂತಿಮ ಪಾಠ ಇದೇ ಅಭ್ಯಾಸವಾಗಿದೆ. ಮಗುವಿನ ಲೌಕಿಕ ಜನ್ಮವಾದಾಗ ಮೊದಲು ಒಂದು ಶಬ್ದದ ನೆನಪು ಮಾಡಲಾಗುತ್ತದೆ ಅಥವಾ ಕಲಿಸಲಾಗುತ್ತದೆಯಲ್ಲವೇ? ಇಲ್ಲಿಯೂ ಸಹ ಅಲೌಕಿಕ ಜನ್ಮ ಪಡೆಯುತ್ತಲೇ ಮೊದಲು ಯಾವ ಶಬ್ದವನ್ನು ಕಲಿತಿರಿ? ತಂದೆಯನ್ನು ನೆನಪು ಮಾಡಿ. ಆದ್ದರಿಂದ ಜನ್ಮದ ಮೊದಲ ಶಬ್ದ ಲೌಕಿಕದ್ದಾಗಿರಲಿ, ಅಲೌಕಿಕದ್ದಾಗಿರಲಿ ಅದೇ ಆಗಿದೆ. ಇದು ಕಠಿಣವಾಗಲು ಸಾಧ್ಯವೇ?

ತಮಗೆ ತಾವೇ ಡ್ರಿಲ್ ಮಾಡುವ ಅಭ್ಯಾಸವನ್ನು ಹಾಕಿಕೊಳ್ಳುವುದಿಲ್ಲವೇ? ಇದಾಗಿದೆ ಬುದ್ಧಿಯ ಡ್ರಿಲ್, ಲೌಕಿಕ ವ್ಯಾಯಾಮ ಮಾಡುವಾಗಲೂ ಮೊದಲು ಬಹಳ ನೋವನ್ನು ಅನುಭವಿಸುತ್ತಾರೆ ಮತ್ತು ಕಷ್ಟವಾಗುತ್ತದೆ ಆದರೆ ಅಭ್ಯಾಸಿಯಾದಾಗ ವ್ಯಾಯಾಮ ಮಾಡದೇ ಅವರು ಇರಲಾರರು. ಆದ್ದರಿಂದ ಇದೂ ಬುದ್ಧಿಯ ವ್ಯಾಯಾಮ ಮಾಡಿಸುವ ಅಭ್ಯಾಸ ಕಡಿಮೆಯಿರುವ ಕಾರಣ ಮೊದಲು ಕಷ್ಟವಾಗುತ್ತದೆ. ಆಮೇಲೆ ತಲೆ ಭಾರವಾಗುವ ಅಥವಾ ಯಾವುದಾದರೂ ವಿಘ್ನ ಎದುರಿಗೆ ಬರುವ ಅನುಭವವಾಗುತ್ತಿರುತ್ತದೆ. ಆದ್ದರಿಂದ ಈ ರೀತಿಯ ಅಭ್ಯಾಸಿಯಾಗಬೇಕು. ಇದಿಲ್ಲದೇ ರಾಜ್ಯ-ಭಾಗ್ಯದ ಪ್ರಾಪ್ತಿಯಾಗುವುದು ಕಠಿಣ. ಯಾರಿಗೆ ಈ ಅಭ್ಯಾಸ ಕಷ್ಟವಾಗುತ್ತದೆಯೋ, ಅವರಿಗೆ ಪ್ರಾಪ್ತಿಯೂ ಕಷ್ಟವಾಗಿದೆ. ಆದ್ದರಿಂದ ಈ ಮುಖ್ಯ ಅಭ್ಯಾಸವನ್ನು ಸಹಜ ಮತ್ತು ನಿರಂತರ ಮಾಡಿಕೊಳ್ಳಿ. ಇಂತಹ ಅಭ್ಯಾಸ ಮಾಡುವವರು ಅನೇಕ ಆತ್ಮರಿಗೆ ಸಾಕ್ಷಾತ್ಕಾರ ಮಾಡಿಸುವಂತಹ ಸಾಕ್ಷಾತ್ ಬಾಪ್ ದಾದಾ ಆಗಿ ಕಂಡು ಬರುತ್ತಾರೆ. ವಾಣಿಯಲ್ಲಿ ಬರುವುದು ಎಷ್ಟು ಸಹಜವೋ ಅಷ್ಟೇ ವಾಣಿಯಿಂದ ದೂರ ಹೋಗುವುದು ಸಹಜವಾಗಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 18-06-1971.

***ಬುದ್ಧಿಯ ಅಲೌಕಿಕ ವ್ಯಾಯಾಮ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದು ಕ್ಷಣಕ್ಕಿಂತಲೂ ಕಡಿಮೆ ಸಮಯದಲ್ಲಿ ಯಾವ ಸ್ವಮಾನದಲ್ಲಾದರೂ ಸ್ಥಿತವಾಗಬಲ್ಲ ಮಾಸ್ಟರ್ ಜ್ಞಾನಸಾಗರನು ಮತ್ತು ಮಾಸ್ಟರ್ ಸರ್ವ ಶಕ್ತಿವಂತನು.

2. ನಾನು ಸಾಕಾರದಲ್ಲಿ ಇರುತ್ತಾ ಈಗೀಗ ಪರಂಧಾಮ ನಿವಾಸಿ, ಈಗೀಗ ಅವ್ಯಕ್ತ ವತನವಾಸಿಯಾಗಿ ಮತ್ತು ಸೇವೆ ಮಾಡುತ್ತಲೂ ಸ್ವ ಸ್ವರೂಪದ ಸ್ಮೃತಿಯಲ್ಲಿ ಇರುವ ಬುದ್ಧಿಯ ಅಲೌಕಿಕ ವ್ಯಾಯಾಮವನ್ನು ಮಾಡಿದ್ದೇನೆ. (ನಿರಾಕಾರಿ, ಆಕಾರಿ, ಸಾಕಾರಿ)

3. ನಾನು ಸರ್ವಶಕ್ತಿಗಳ ಆಧಾರದಿಂದ ಅಲೌಕಿಕ ವ್ಯಾಯಾಮದ ಅಭ್ಯಾಸವನ್ನು ನಿರಂತರ ಮತ್ತು ಸಹಜವಾಗಿ ಮಾಡಿಕೊಂಡಿದ್ದೇನೆ.

4. ನಾನು ಅಲೌಕಿಕ ಜನ್ಮವನ್ನು ಪಡೆದಾಕ್ಷಣ "ತಂದೆಯನ್ನು ಸ್ಮೃತಿ ಮಾಡಿರಿ" ಎಂಬ ಮಾತನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ. (ಅಲೌಕಿಕ ಜನ್ಮ ಅರ್ಥಾತ್ ಸಂಕಲ್ಪದಿಂದ ನಾನು ಆತ್ಮ ಎಂಬ ಸ್ಮೃತಿಯಲ್ಲಿರುವುದು)

5. ನಾನು ಶ್ರೇಷ್ಠ ರಾಜ್ಯ ಭಾಗ್ಯವನ್ನು ಹೊಂದಲು ಅಲೌಕಿಕ ವ್ಯಾಯಾಮದ ಅಭ್ಯಾಸವನ್ನು ಮಾಡಿದ್ದೇನೆ.

6. ನಾನು ಬುದ್ಧಿಯ ಅಲೌಕಿಕ ವ್ಯಾಯಾಮದಿಂದ ಸಾಕ್ಷಾತ್ ಬಾಪ್ ದಾದಾರವರನ್ನು ಸಾಕ್ಷಾತ್ಕಾರ ಮಾಡಿಸಿದ್ದೇನೆ.